229

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಇಲಾಖೆಯ ವ್ಯಾಪ್ತಿಯಲ್ಲಿ **K-KISAN** ಪ್ರಾಜೆಕ್ಟ್ (ಕರ್ನಾಟಕ – ಕೃಷಿ ಇನ್‌ಫರ್ಮೇಶನ್ ಸರ್ವೀಸಸ್ ಅಂಡ್ ನೆಟ್ ವರ್ಕಿಂಗ್) ಅನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಸರ್ಕಾರಿ ಆದೇಶ ಸಂಖ್ಯೆ: ಕೃಇ 08 ಕೃಇಕ 2011, ಬೆಂಗಳೂರು, ದಿನಾಂಕ: 17.04.2012**

ಓದಲಾಗಿದೆ: ಕೃಷಿ ಆಯುಕ್ತರ ಏಕ ಕಡತ ಸಂಖ್ಯೆ: **RSK/Computerisation/Proposal-Approval/2010-11,** ದಿನಾಂಕ: 16.12.2010.

**ಪ್ರಸ್ತಾವನೆ:**

ಕೃಷಿ ಇಲಾಖೆಯು ರೈತ ಮಿತ್ರ ಯೋಜನೆಯಡಿ, 2000–01 ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರತಿ ಹೋಬಳಿಗೊಂದರಂತೆ ಒಟ್ಟು 747 ರೈತ ಸಂಪರ್ಕ ಕೇಂದ್ರಗಳನ್ನು ರಾಜ್ಯ ಸರ್ಕಾರವು ಸ್ಥಾಪಿಸಿತು. ಈ ರೈತ ಸಂಪರ್ಕ ಕೇಂದ್ರಗಳ ಮೂಲ ಉದ್ದೇಶವು ಈ ಕೆಳಕಂಡಂತಿರುತ್ತದೆ:-

- ಬೆಳೆ ಆಯ್ಕೆ, ಬೆಳೆ ಉತ್ಪಾದನಾ ಕ್ರಮಗಳು, ಮಾರುಕಟ್ಟೆ ಮಾಹಿತಿ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು.
- ಬೀಜ ಮೊಳಕೆ ಮತ್ತು ಗುಣಮಟ್ಟ ಪರೀಕ್ಷೆ, ಮಣ್ಣು ಪರೀಕ್ಷೆ ಇತ್ಯಾದಿ ಮೂಲ ಪರೀಕ್ಷಾ ಸೌಲಭ್ಯಗಳನ್ನು ಸ್ಥಳೀಯವಾಗಿಯೇ ನೀಡುವುದು.
- ಕೃಷಿ ಪರಿಕರಗಳಾದ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮುಂತಾದವುಗಳನ್ನು ಸ್ಥಳೀಯವಾಗಿ ಒದಗಿಸಲು ಸಂಯೋಜನೆ ಮಾಡುವುದು.
- ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಬಿತ್ತನೆ ಮತ್ತು ಇತರೆ ಪರಿಕರಗಳ (ತಾಂತ್ರಿಕತೆಗಳ) ಪ್ರಾತ್ಯಕ್ಷಿಕೆಗೆ ಸೌಲಭ್ಯ ಒದಗಿಸುವುದು.
- ಸಾರ್ವಜನಿಕ ಮತ್ತು ಖಾಸಗಿ ರಂಗಗಳ ತಂತ್ರಜ್ಞಾನ ಮತ್ತು ಪರಿಕರಗಳ ತುಲನಾ ಪರಿಶೀಲನೆಗೆ ಅವಕಾಶ ಕಲ್ಪಿಸುವುದು.

ಈ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ರೈತರಿಗೆ ನೀಡಲು, ಮುಂಗಾರು ಹಂಗಾಮಿನಲ್ಲಿ, ರೈತ ಸಂಪರ್ಕ ಕೇಂದ್ರಗಳ ಜೊತೆಗೆ, ಅವಶ್ಯಕತೆಗನುಗುಣವಾಗಿ, ಹೆಚ್ಚುವರಿ ಪರಿಕರ ವಿತರಣಾ ಕೇಂದ್ರಗಳನ್ನು ಸಹ ತೆರೆಯಲಾಗುತ್ತಿದೆ ಮತ್ತು ಈ ಪದ್ಧತಿಯು ಕಳೆದ 12 ವರ್ಷಗಳಿಂದ ಯಾವುದೇ ತೊಂದರೆಗಳಿಲ್ಲದೆ ಸಮರ್ಪಕವಾಗಿ ನಡೆಯುತ್ತಿದೆ.

ಒಂದೇ ಸೂರಿನಡಿ ರೈತರಿಗೆ ಗುಣಮಟ್ಟದ ಪರಿಕರಗಳನ್ನು ಮತ್ತು ಪರಿಣಾಮಕಾರಿ ಸೇವೆಗಳನ್ನು ತಲಪಿಸಲು, ರಾಷ್ಟ್ರದಲ್ಲಿಯೇ ವಿಶಿಷ್ಟವಾಗಿರುವ ಹೋಬಳಿ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳಿಗೆ, ಇಲಾಖೆಯು ಶಾಶ್ವತ ಸೌಕರ್ಯಗಳನ್ನು ಸಹ ಕಲ್ಪಿಸಿರುತ್ತದೆ. ಮುಂದುವರೆದು, ಇತ್ತೀಚಿನ ದಿನಗಳಲ್ಲಿ ಸರ್ಕಾರವೂ ರೈತ ಫಲಾನುಭವಿಗಳಿಗೆ ನೀಡುತ್ತಿರುವ ಸಹಾಯಧನ ಹಾಗೂ ಫಲಾನುಭವಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ರೈತರಿಗೆ ನೀಡುತ್ತಿರುವ ಸೇವೆಗಳನ್ನು ಗುಣಾತ್ಮಕ, ಸಮರ್ಪಕ ಮತ್ತು ಪಾರದರ್ಶಕವಾಗಿ ನೀಡಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ಆಧುನೀಕರಣಗೊಳಿಸುವಲ್ಲಿ ಕೃಷಿ ಇಲಾಖೆಯು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅಳವಡಿಸಿಕೊಂಡು "ಕೃಷಿಯಲ್ಲಿ ಉತ್ಪಾದಕತೆ ಮತ್ತು ಆದಾಯ ಮಟ್ಟವನ್ನು" ಅಂತರ ರಾಷ್ಟ್ರೀಯ ಮಟ್ಟಕ್ಕೆ ಹೆಚ್ಚಿಸುವತ್ತ ವಾತಾವರಣವನ್ನು ಸೃಷ್ಟಿಸುವ ಧ್ಯೇಯೋದ್ದೇಶದೊಂದಿಗೆ ರೈತ ಸಂಪರ್ಕ ಕೇಂದ್ರಗಳಿಂದ ಕೃಷಿ ಸಚಿವಾಲಯದವರೆಗೆ- 747 ರೈತ ಸಂಪರ್ಕ ಕೇಂದಗಳು, 176 ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳು, 23 ಜಿಲ್ಲಾ ಕೃಷಿ ತರಬೇತಿ ಕೇಂದಗಳು, 48 ಪ್ರಯೋಗಾಲಯಗಳು, 30 ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗಳು, ಕೇಂದ ಕಛೇರಿ ಮತ್ತು ಕೃಷಿ ಸಚಿವಾಲಯ- ಇಲಾಖೆಯು ನೀಡುತ್ತಿರುವ ಪಮುಖ ಸೇವೆಗಳನ್ನು, ತಂತ್ರಜ್ಞಾನ ಮಾಹಿತಿಗಳನ್ನು ಸುವೇಗದಲ್ಲಿ/ ಸಕಾಲದಲ್ಲಿ ರೈತ ಸಮುದಾಯಕ್ಕೆ ಕೆ-ಕಿಸಾನ್ ಪ್ರಾಜೆಕ್ಟ್‌ನ್ನು ಅಂದಾಜು ರೂ. 53.00 ಕೋಟಿಗಳಲ್ಲಿ (ರೂಪಾಯಿ ಐವತ್ಮೂರು ಕೋಟಿ ಮಾತ್ರ) ಅನುಷ್ಠಾನಗೊಳಿಸಲು ಯೋಜಿಸಿದೆ.

ಪ್ರಸ್ತಾಪಿತ ಕೆ-ಕಿಸಾನ್ ಯೋಜನೆಯು ಹಾಲಿ ಇಲಾಖೆಯ ತೊಂದರೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಸಹಾಯಕವಾಗುವುದರ ಜೊತೆಗೆ ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ವಿಸ್ತರಣಾ ಸೇವೆಗಳ ಮೇಲೆ ಹೆಚ್ಚು ಗಮನಹರಿಸಲು ಶಕ್ತಗೊಳಿಸುತ್ತದೆ. ಈ ಯೋಜನೆಯು, ವಿವಿಧ ಯೋಜನೆಗಳ ಪ್ರಗತಿ ಮೇಲ್ವಿಚಾರಣೆಯನ್ನು ರೈತ ಸಂಪರ್ಕ ಕೇಂದ್ರಗಳ ಮಟ್ಟದವರೆಗೂ ಆನ್‌ಲೈನ್ ಮುಖಾಂತರ ನೀಡುವುದರ ಜೊತೆಗೆ ಸರಿಯಾದ ಫಲಾನುಭವಿಗಳನ್ನು ಗುರುತಿಸಲು ಹಾಗೂ ಫಲಾನುಭವಿಗಳು ಪ್ರಯೋಜನಗಳನ್ನು ನಕಲು ಪಡೆಯುವುದನ್ನು ತಡೆಯಲು ಸಹಕರಿಸುತ್ತದೆ. ಹೀಗಾಗಿ ಆಯವ್ಯಯವನ್ನು ಸಹ ನಿಯಂತ್ರಿಸುತ್ತದೆ.

ಇದಲ್ಲದೆ, ಪರಿಕರಗಳನ್ನು ಹಾಗೂ ವಿಸ್ತರಣಾ ಸೇವೆಗಳನ್ನು ಸರಿಯಾದ ಸಮಯದಲ್ಲಿ ಒದಗಿಸುವುದು ಕೃಷಿ ಉತ್ಪಾದಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೃಷಿ ಇಲಾಖೆಯು ಪ್ರತಿ ಹಂಗಾಮಿನಲ್ಲಿ ಕೃಷಿ ಸಮುದಾಯಕ್ಕೆ ಅನುಕೂಲವಾಗುವಂತೆ ಗುಣಮಟ್ಟದ ಪರಿಕರಗಳ ಪೂರೈಕೆಯನ್ನು ಖಚಿತ ಪಡಿಸಲು ಕೃಷಿ ವಿಶ್ವವಿದ್ಯಾಲಯಗಳ ಸಹಕಾರದೊಂದಿಗೆ, ಕೆ.ಟಿ.ಪಿ.ಪಿ. ಕಾಯ್ದೆ ಅನ್ವಯ ಸರಬರಾಜುದಾರರನ್ನು ಆಯ್ಕೆ ಮಾಡುತ್ತದೆ. ಜೊತೆಗೆ, ಹಲವು ಸಂದರ್ಭಗಳಲ್ಲಿ ರೈತ ಸಂಪರ್ಕ ಕೇಂದ್ರಗಳಲ್ಲಿ ನಡೆಯುವ ವಹಿವಾಟು ಹೆಚ್ಚಾಗಿ ಸಣ್ಣ ಮತ್ತು ಅತಿಸಣ್ಣ ರೈತರನ್ನು ಒಳಗೊಂಡಿರುವುದರಿಂದ ಪ್ರತಿ ವಹಿವಾಟಿನ ಮೌಲ್ಯ ರೂ.ಐದು ಸಾವಿರಕ್ಕಿಂತ ಕಡಿಮೆ ಇರುತ್ತದೆ. ಆದ್ದರಿಂದ ಸದರಿ ಕಡಿಮೆ ಮೊತ್ತವನ್ನು ರೈತ ಸಂಪರ್ಕ ಕೇಂದ್ರಗಳಲ್ಲಿಯೇ ನೇರವಾಗಿ ಪಡೆದು ದಾಸ್ತಾನು ವಿತರಿಸುವುದು ಅನಿವಾರ್ಯವಾಗುತ್ತದೆ ಹಾಗೂ ರೂ. ಐದು ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ಬ್ಯಾಂಕ್‌ನಲ್ಲಿ ಪಾವತಿಸುವುದು / ಡಿಡಿ ಮೂಲಕ ಪಾವತಿಸುವಂತೆ ಕ್ರಮ ಕೈಗೊಳ್ಳಬಹುದಾಗಿದೆ.

**ಕೆ-ಕಿಸಾನ್ ಯೋಜನೆಯ ಉದ್ದೇಶಗಳು:**

- ರಾಜ್ಯದಲ್ಲಿ ಕೃಷಿ ಇಲಾಖೆಯ ಎಲ್ಲಾ ಕಛೇರಿಗಳನ್ನು IT ಮತ್ತು non-IT ಸೌಲಭ್ಯಗಳನ್ನು ಒದಗಿಸುವ ಮೂಲಕ ಕಂಪ್ಯೂಟರೀಕರಣಗೊಳಿಸುವುದು (ಯಂತ್ರಾಂಶಗಳು, ತಂತ್ರಾಂಶಗಳು, ನೆಟ್‌ವರ್ಕ್, ವೆಬ್‌ಸೈಟ್, ಪೋರ್ಟಲ್).

- ರೈತರಿಗೆ 24/7 ಆಧಾರದ ಮಾಹಿತಿ ಮತ್ತು ಸೇವೆ ನೀಡುವುದು: ಅರ್ಜಿಗಳ ವಸ್ತುಸ್ಥಿತಿ, ಪರಿಕರ ಲಭ್ಯತೆ, ಮಾರುಕಟ್ಟೆ ಮಾಹಿತಿ, ತಂತ್ರಜ್ಞಾನ/ತಾಂತ್ರಿಕತೆ, ಹವಾಮಾನ ಮುನ್ಸೂಚನೆ, ಪೀಡೆ ಸರ್ವೇಕ್ಷಣೆ ಇತ್ಯಾದಿಗಳ ಮೂಲಕ ರೈತರಿಗೆ ನೀಡಲಾಗುತ್ತಿರುವ ಸೇವೆ/ಸವಲತ್ತುಗಳಲ್ಲಿ– ಪಾರದರ್ಶಕತೆ, ಅಕೌಂಟಬಿಲಿಟಿ ಮತ್ತು ವೇಗವನ್ನು ಹೆಚ್ಚಿಸುವುದರೊಂದಿಗೆ, ಆಡಳಿತ ವೆಚ್ಚವನ್ನು ತಗ್ಗಿಸುವುದು.
- ರಾಜ್ಯದಲ್ಲಿರುವ ರೈತ ಕುಟುಂಬಗಳ ಡಾಟಾ ಬೇಸ್ ಃ ತಯಾರಿ ಮತ್ತು ನಿರ್ವಹಣೆ.
- ಆನ್–ಲೈನ್ ವೇದಿಕೆಯನ್ನು ಕಲ್ಪಿಸುವುದು ಃ ಅರ್ಜಿಗಳ ಸಲ್ಲಿಕೆ, ವಸ್ತುಸ್ಥಿತಿ, ಕುಂದುಕೊರತೆಗಳಿಗೆ ಸ್ಪಂದಿಸುವುದು, ಪಾವತಿ, ದಾಖಲಾತಿಗಳ ವಿನಿಮಯ, inventory report, ಸಹ ಇಲಾಖೆಗಳೊಂದಿಗೆ ಸಂಪರ್ಕ.
- ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳ ನಡುವೆ ನೆಟ್ ವರ್ಕಿಂಗ್ ಃ ಕೃಷಿ ಪರಿಕರಗಳ ಉತ್ಪಾದಕರು, ಸರಬರಾಜುದಾರರು, ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳು.
- ಆನ್–ಲೈನ್ ದಾಖಲೆಗಳ ನಿರ್ವಹಣೆಯಿಂದ ಅಧಿಕಾರಿಗಳ ಅಮೂಲ್ಯ ವೇಳೆಯನ್ನು ವಿಸ್ತರಣಾ ಚಟುವಟಿಕೆಗೆ ಕೇಂದ್ರೀಕರಿಸುವುದು; ಆಡಳಿತ ವೆಚ್ಚವನ್ನು ಕಡಿಮೆಗೊಳಿಸುವುದು.
- ಮಾನವ ಸಂಪನ್ಮೂಲ / ಸಿಬ್ಬಂದಿ ನಿರ್ವಹಣೆ.
- ಆಸ್ತಿ ನಿರ್ವಹಣೆ: ಕಟ್ಟಡ, ಭೂಮಿ, ನಿವೇಶನ, ವಾಹನಗಳು, ದಾಖಲಾತಿಗಳು, ಉಪಕರಣಗಳು ಮತ್ತು ಇತರೆ ಸಂಪನ್ಮೂಲ ಹಾಗೂ ಮೂಲಭೂತ ಸೌಕರ್ಯಗಳು.

<u>ಕೆ–ಕಿಸಾನ್ ಯೋಜನೆಯ ಅನುಷ್ಠಾನ ಮಾರ್ಗ :</u>

- <u>ಇ–ಆಡಳಿತ ಇಲಾಖೆಯ ಪಾತ್ರ:</u> ಡಾಟಾ ಮ್ಯಾನೇಜ್‌ಮೆಂಟ್ (State Data Center), ತಾಲ್ಲೂಕು ಮಟ್ಟದವರೆಗೆ ಅಂತರ್‌ಜಾಲ ಮತ್ತು ಕೆ–ಸ್ವಾನ್ (K-SWAN) ಸಂಪರ್ಕ, ಮಾಹಿತಿ ತಂತ್ರಜ್ಞಾನ ನೀತಿ ಅಳವಡಿಕೆ ಬಗ್ಗೆ ಸಲಹೆ.
- <u>ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಕೇಂದ್ರ (ನ್ಯಾಷನಲ್ ಇನ್ಫಾರ್ಮ್ಯಾಟಿಕ್ಸ್ ಸೆಂಟರ್–NIC, ಬೆಂಗಳೂರು) ರವರ ಪಾತ್ರ:</u> Application Modules ಗಳ ವಿನ್ಯಾಸ, ಅಭಿವೃದ್ಧಿ, ಏಕೀಕರಣ ಮತ್ತು ಅಳವಡಿಕೆ – ಮಣ್ಣು ಆರೋಗ್ಯ/ ನೀರು ವಿಶ್ಲೇಷಣೆ ವರದಿ, ಉತ್ಪಾದಕರು, ಸರಬರಾಜುದಾರರು ಮತ್ತು ಮಾರಾಟಗಾರರಿಗೆ ಪರವಾನಗಿ ಒದಗಿಸುವುದು, ಮಾಹಿತಿ ಪ್ರಸಾರ, ಸಾರ್ವಜನಿಕ ಅಹವಾಲುಗಳು, ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಉಸ್ತುವಾರಿ, ಆಸ್ತಿ ನಿರ್ವಹಣೆ, ಇತ್ಯಾದಿ.
- <u>ಸೇವೆಯನ್ನು ಒದಗಿಸುವ ಸಂಸ್ಥೆಯ ಮೂಲಕ ಯೋಜನೆಯ ಕಾರ್ಯಚರಣೆ :</u> ಖರೀದಿ/ ಸಂಗ್ರಹಣೆ, ಯಂತ್ರಾಂಶ ಮತ್ತು ತಂತ್ರಾಂಶಗಳ ಅಳವಡಿಕೆ, ಕಾನ್ಫಿಗರೇಷನ್, ನೆಟ್‌ವರ್ಕಿಂಗ್, ಮೂಲಭೂತ ಸೌಕರ್ಯಗಳು (ಗಣಕಯಂತ್ರ ಟೇಬಲ್ ಮತ್ತು ಖುರ್ಚಿ) ಮತ್ತು ಸ್ಥಳ ಸಿದ್ಧತೆ, ಮಾನವ ಸಂಪನ್ಮೂಲ, ತರಬೇತಿ, ಲೆಗಸಿ ಡಾಟಾ ಡಿಜಿಟೈಜೇಷನ್, ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಐದು ವರ್ಷದ ಅವಧಿಗೆ Quarterly Guaranted Revenue (QGR) ಆಧಾರಿತ ಪಾವತಿ.

- ಯೋಜನೆಗಳ ಸೌಲಭ್ಯಗಳ ಅಳವಡಿಕೆ ಮತ್ತು ಮೂರನೆ ಸಂಸ್ಥೆಯಿಂದ ತಪಾಸಣೆ (Third **Party** Inspection) ವರದಿಯೊಂದಿಗೆ ಯೋಜನಾ ಸೌಲಭ್ಯಗಳ (capital **expenditure**) ಅಳವಡಿಕೆಯ ಶೇ. 100 ರಷ್ಟನ್ನು ಮೂಲ ಬಿಲ್ಲುಗಳನ್ನು (Original **Invoice**) ಪಡೆದುಕೊಂಡು ಸೇವೆ ಒದಗಿಸುವ ಸಂಸ್ಥೆಗೆ ಪಾವತಿಸುವುದು.

<u>ಯೋಜನಾ ಗಾತ್ರ:</u>

ಪ್ರಸ್ತಾಪಿತ ಕೆ-ಕಿಸಾನ್ ಯೋಜನೆ ಅಂದಾಜು ವೆಚ್ಚ ರೂ. **53.00 ಕೋಟಿಗಳು** (ರೂಪಾಯಿ ಐವತ್ತೂರು **ಕೋಟಿಗಳು** ಮಾತ್ರ). ಅದರಲ್ಲಿ ಬಂಡವಾಳ ವೆಚ್ಚ **(capital cost)** ಅಂದಾಜು ರೂ. 39.00 **ಕೋಟಿಗಳು** (ರೂಪಾಯಿ ಮುವತ್ತೊಂಬತ್ತು ಕೋಟಿಗಳು **ಮಾತ್ರ)** ಹಾಗೂ ಕಾರ್ಯಚರಣೆ ಮತ್ತು ನಿರ್ವಹಣೆ ವೆಚ್ಚ (Operations and Maintenance **cost)** ಅಂದಾಜು ರೂ. 14.00 ಕೋಟಿಗಳು **(**ರೂಪಾಯಿ ಹದಿನಾಲ್ಕು ಕೋಟಿಗಳು ಮಾತ್ರ) ಆಗಿರುತ್ತದೆ.

<u>ಅನುದಾನದ ಲಭ್ಯತೆ:-</u>

ಕೆ-ಕಿಸಾನ್ ಯೋಜನೆಯನ್ನು ಅನುಷ್ಠಾನಗೊಳಿಸಲು **ಕೇಂದ್ರ ಸರ್ಕಾರದ** ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ರಾಜ್ಯ ಸರ್ಕಾರದ **ರಾಜ್ಯ** ವಲಯ ಯೋಜನೆ ಕಾರ್ಯಕ್ರಮಗಳಲ್ಲಿ ಮೀಸಲಿಟ್ಟ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುವುದು.

ಕೆ.ಕಿಸಾನ್ ಯೋಜನೆಯು ಇ-ಆಡಳಿತ ಇಲಾಖೆಗೆ **ಸಂಬಂಧಿತ** ಯೋಜನೆಯಾಗಿದ್ದು, ದಿನಾಂಕ: 28.10.2011 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ(ಇ-ಆಡಳಿತ) ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವಾರ್ಷಿಕ ಕ್ರಿಯಾ ಯೋಜನೆಗಳ ಸಮಿತಿಯ ಅನುಮೋದನೆ, ದಿನಾಂಕ: 31.12.2011 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿ, ರವರ ಅಧ್ಯಕ್ಷತೆಯಲ್ಲಿ ಇ-ಆಡಳಿತ ವಾರ್ಷಿಕ ಕ್ರಿಯಾ ಯೋಜನೆಗಳ ಅಧಿಕಾರಯುಕ್ತ **ಸಮಿತಿಯ ಅನುಮೋದನೆ** ಹಾಗೂ ದಿನಾಂಕ: 15.10.2010, 30.11.2010, 04.01.2011 ಹಾಗೂ 21.02.2012 ರಂದು ಕೃಷಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ <u>ರಚಿಸಲಾಗಿರುವ ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯ</u> (TAP) ಅನುಮೋದನೆ ಪಡೆಯಲಾಗಿದೆ. ಆದ್ದರಿಂದ, ಕೃಷಿ ಇಲಾಖೆಯ ವ್ಯಾಪ್ತಿಯಲ್ಲಿ K-KISAN ಪ್ರಾಜೆಕ್ಟ್ (ಕರ್ನಾಟಕ – ಕೃಷಿ ಇನ್‌ಫರ್ಮೇಶನ್ ಸರ್ವೀಸಸ್ ಅಂಡ್ ನೆಟ್ ವರ್ಕಿಂಗ್) ಅನ್ನು ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆಯನ್ನು ಕೃಷಿ ಆಯುಕ್ತರು ಮೇಲೆ ಓದಲಾದ ಏಕ ಕಡತದಲ್ಲಿ ಕೋರಿರುತ್ತಾರೆ. ಆದಕ್ಕಾಗಿ ಈ ಆದೇಶ.

<u>ಆದೇಶ</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ **"<u>ಗಣಕೀಕರಣದ ಮುಖಾಂತರ ರೈತ ಸಂಪರ್ಕ ಕೇಂದ್ರಗಳ</u>** <u>ಬಲವರ್ಧನೆ</u>ಗಾಗಿ ಕೃಷಿ ಇಲಾಖೆಯ ವ್ಯಾಪ್ತಿಯಲ್ಲಿ **K-KISAN** ಪ್ರಾಜೆಕ್ಟ್ (ಕರ್ನಾಟಕ – ಕೃಷಿ ಇನ್‌ಫರ್ಮೇಶನ್ ಸರ್ವೀಸಸ್ ಅಂಡ್ ನೆಟ್ ವರ್ಕಿಂಗ್) ಅನ್ನು ರೂ. 53.00 ಕೋಟಿಗಳ (ರೂಪಾಯಿ ಐವತ್ತೂರು ಕೋಟಿ ಮಾತ್ರ) ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಹಾಗೂ ಈ ಕೆಳಕಂಡ ಅಂಶಗಳಿಗೂ ಸಹ ಸರ್ಕಾರದ ಅನುಮೋದನೆ ನೀಡಲಾಗಿದೆ:

1. ಕೆ–ಕಿಸಾನ್ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ತಗಲುವ ವೆಚ್ಚವನ್ನು:

a) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಈಗಾಗಲೇ 2009–10 ಮತ್ತು 2010–11ನೇ ಸಾಲಿನಲ್ಲಿ ಅನುಕ್ರಮವಾಗಿ ಬಿಡುಗಡೆಯಾದ ರೂ.5.00 ಕೋಟಿ (ರೂಪಾಯಿ ಐದು ಕೋಟಿಗಳು ಮಾತ್ರ) ಮತ್ತು 20.00 ಕೋಟಿ (ರೂಪಾಯಿ ಇಪ್ಪತ್ತು ಕೋಟಿಗಳು ಮಾತ್ರ) State Agricultural Management Agency (SAMA) ಖಾತೆಯಲ್ಲಿರುವ ಅಂದರೆ, ಒಟ್ಟು ರೂ.25.00 ಕೋಟಿ (ರೂಪಾಯಿ ಇಪ್ಪತ್ತೈದು ಕೋಟಿಗಳು ಮಾತ್ರ) ಅನುದಾನವನ್ನು ಬಳಸಿಕೊಳ್ಳಲು ಅನುಮೋದನೆ ಹಾಗೂ ಸದರಿ ಅನುದಾನವನ್ನು 2012–13ನೇ ಸಾಲಿನಲ್ಲಿ ಉಪಯೋಗಿಸಲು ಅನುಮೋದನೆ ನೀಡಿದೆ;

b) 2011–12ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಬಿಡುಗಡೆಯಾದ . ಅನುದಾನ ರೂ.15.00 ಕೋಟಿಗಳನ್ನು. (ರೂಪಾಯಿ ಹದಿನೈದು ಕೋಟಿಗಳು ಮಾತ್ರ) ಉಪಯೋಗಿಸಲು ಅನುಮೋದನೆ ನೀಡಿದೆ;

c) 2012–13ನೇ ಸಾಲಿನ ರಾಜ್ಯ ಆಯವ್ಯಯದ ಲೆಕ್ಕ ಶೀರ್ಷಿಕೆ: 2401–00–111–0–07 ಅಡಿಯಲ್ಲಿ ಲಭ್ಯವಿರುವ ರೂ.10.00 ಕೋಟಿಗಳನ್ನು (ರೂಪಾಯಿ ಹತ್ತು ಕೋಟಿಗಳು ಮಾತ್ರ) ಉಪಯೋಗಿಸಲು ಅನುಮೋದನೆ ನೀಡಿದೆ.

2. ಕೆ–ಕಿಸಾನ್ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ. State Agricultural Management Agency (SAMA) ಖಾತೆಯಲ್ಲಿ ಕಾಯ್ದಿರಿಸಲಾದ ಅನುದಾನಕ್ಕೆ ಕ್ರೋಡೀಕೃತವಾಗುವ ಸಂಚಿತ ಬಡ್ಡಿಯನ್ನು ಯೋಜನೆಯ ಅನುಷ್ಠಾನಕ್ಕೆ ಉಪಯೋಗಿಸಿಕೊಳ್ಳಲು ಸಹ ಅನುಮೋದನೆ ನೀಡಿದೆ.

3. ಕೆ–ಕಿಸಾನ್ ಯೋಜನೆಯ ಅನುಷ್ಠಾನಗೊಳಿಸಲು ಈಗಾಗಲೇ ಲಭ್ಯವಿರುವ ಅನುದಾನವನ್ನು ಹೊರತುಪಡಿಸಿ, ಇನ್ನುಳಿದ ಅನುದಾನವನ್ನು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ರಾಜ್ಯ ಸರ್ಕಾರದ ರಾಜ್ಯ ವಲಯ ಕೆ–ಕಿಸಾನ್ ಯೋಜನಾ ಕಾರ್ಯಕ್ರಮದಲ್ಲಿ ಮುಂಬರುವ ವರ್ಷಗಳಲ್ಲಿ ಆಯವ್ಯಯ ಕಲ್ಪಿಸಲು ಅನುಮೋದನೆ ನೀಡಿದೆ.

4. ಕೆ–ಕಿಸಾನ್ ಯೋಜನೆಗೆ ಸ್ವತಂತ್ರ ಉಸ್ತುವಾರಿ, ಮೌಲ್ಯಮಾಪನ ಮತ್ತು ತಪಾಸಣೆಯನ್ನು ಅಧಿಕೃತ ಮೂರನೇ ಏಜೆನ್ಸಿಯಿಂದ ಕೈಗೊಳ್ಳಲು ಅನುಮೋದನೆ ನೀಡಿದೆ.

5. ಕೃಷಿ ಇಲಾಖೆಯಲ್ಲಿ ಆರ್ಥಿಕ ಇಲಾಖೆ ಹಾಗೂ ಅಧಿಕಾರಯುಕ್ತ ಸಮಿತಿಯ ಸಲಹೆಗಳನ್ನು ಸಾಧ್ಯವಾದ ಮಟ್ಟಿಗೆ ಪರಿಗಣಿಸಿ, ಇಲಾಖೆಯಲ್ಲಿರುವ ಪ್ರಚಲಿತ ವ್ಯವಸ್ಥೆಯನ್ನೇ ಮುಂದುವರೆಸುತ್ತಾ, ನಗದು ವಹಿವಾಟಿನ ಮಿತಿಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರುಗಳ ಅವಶ್ಯಕತೆಗಳಿಗನುಗುಣವಾಗಿ ರೂ.5000.00ಗಳ (ರೂಪಾಯಿ ಐದು ಸಾವಿರ ಮಾತ್ರ). ಮಿತಿಗೊಳಪಟ್ಟು, ಅದಕ್ಕಿಂತಲೂ ಹೆಚ್ಚಿನ ವಹಿವಾಟಿನ ಮೊತ್ತವನ್ನು ಮಾತ್ರ ರೈತರು ತಮ್ಮ ಪಾಲಿನ ನಗದು ಹಣದ ಪಾವತಿಯನ್ನು ಹತ್ತಿರದ ವಾಣಿಜ್ಯ / ಸಹಕಾರಿ ಬ್ಯಾಂಕಿನ ರಸೀದಿ / ಡಿ.ಡಿ.ಗಳ ಮೂಲಕ ಮಾಡಲು ಅವಕಾಶ ಕಲ್ಪಿಸಲು ಅನುಮೋದನೆ ನೀಡಿದೆ.

ಗಣಕಯಂತ್ರ ಮತ್ತು ಇತರೆಗಳನ್ನು ಖರೀದಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ 17ನೇ ನಿಯಮದ (2)ನೇ ಉಪ ನಿಯಮದ ಪರಂತುಕದ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ಅದರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಡಿ. ಪರೀಟ್), 17/4/12
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ, ಪರಿಯೋಜನಾ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಆ.ಸು. ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
8) ಸರ್ಕಾರದ ಉಪ ಕಾರ್ಯದರ್ಶಿ, ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
9) ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿರಸ್ತೆ, ಬೆಂಗಳೂರು.
10) ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
11) **Deputy Director General & Senior Informatics, NIC, VV Towers, Bangalore.**
12) ನಿರ್ದೇಶಕರು, ಖಜಾನೆ ಇಲಾಖೆ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
13) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
14) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 ಮತ್ತು 5), ವಿಧಾನಸೌಧ, ಬೆಂಗಳೂರು.
15) ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಪ್ರಕರಣ ಸಂ:ಸಿ/155/2012, ದಿ:05-04-2012).
16) ರಾಜ್ಯದ ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು (ಕೃಷಿ ಆಯುಕ್ತರವರ ಮೂಲಕ)
17) ರಾಜ್ಯದ ಎಲ್ಲಾ ಜಿಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು (ಕೃಷಿ ಆಯುಕ್ತರವರ ಮೂಲಕ)
18) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ.
19) ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೃಷಿ ಇಲಾಖೆ.
20) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.